‘ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ ಸೋಲಾರ್ ಶಕ್ತಿ ನೀಡುತ್ತಿರುವುದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಡೆತಡೆಗಳಿಲ್ಲದೆ ಆರೋಗ್ಯ ಸೇವೆ ಪಡೆಯಬಹುದು. ಬೇಬಿ ವಾರ್ಮರ್‌ಗಳಿಗೆ, ಆಮ್ಲಜನಕ ಉತ್ಪಾದನಾ ಉಪಕರಣಗಳಿಗೆ ಅಗತ್ಯ ಪ್ರಮಾಣದ ಸೋಲಾರ್ ವಿದ್ಯುತ್ ಲಭ್ಯವಾಗುತ್ತಿದೆ. ಔಷಧಿಗಳನ್ನು ಸಂರಕ್ಷಿಸಲು ಬೇಕಾದ ಶೀಥಲೀಕರಣ ಘಟಕಗಳಿಗೂ ಸಮರ್ಪಕವಾಗಿ ಸೋಲಾರ್ ವಿದ್ಯುತ್ ಪೂರೈಸುವುದು ಸೆಲ್ಕೋ ಯೋಜನೆಯಲ್ಲಿ ಸೇರಿದೆ’ ಎನ್ನುತ್ತಾರೆ ಸುಕುಮಾರ್.

‘ಕೊಪ್ಪಳದ ಬಂಜಾರಾ ಸಮುದಾಯದ ಒಂದು ಕುಟುಂಬಕ್ಕೆ ಸೆಲ್ಕೋ ರೋಟಿ ಯಂತ್ರ ಪರಿಚಯಿಸಲಾಗಿತ್ತು. ಇಡೀ ಹಳ್ಳಿಯ ಸಮುದಾಯ ಇದೀಗ ರೊಟ್ಟಿ ತಯಾರಿಸುವ ಸೋಲಾರ್ ಯಂತ್ರವನ್ನು ಬಳಸುತ್ತಿದೆ’ ಎಂದು ವಿವರ ನೀಡುತ್ತಾರೆ ಸೆಲ್ಕೋ ಸಹಾಯಕ ವ್ಯವಸ್ಥಾಪಕ ಕೆ. ಕರಿಸ್ವಾಮಿ.



ಚಹಾ ಕಪ್‌ಗಳಿಗೆ ಅಂತಿಮ ರೂಪ ನೀಡುತ್ತಿರುವ ಪುಟ್ಟಲಕ್ಷ್ಮಿ

## ಕಮ್ಮಾರಿಕೆ ಉದ್ಯಮ

ರೈತರಿಗೆ ಕುಡುಗೋಲು, ನೇಗಿಲು, ಗುಳ, ಕೊಡಲಿ, ಹಾರೆಗಳನ್ನು ಮಾಡುವ ಕಮ್ಮಾರಿಕೆ ಚನ್ನಪಟ್ಟಣ ಜಿಲ್ಲೆ ಹೆಚ್. ಬ್ಯಾಡರಹಳ್ಳಿಯಲ್ಲಿರುವ ದೇವರಾಜ್ ಅವರ ಕುಲಕಸುಬು. ವಿದ್ಯುತ್ ಕೈಕೊಟ್ಟಾಗ ಅವರು ಸುಮ್ಮನೆ ಕುಳಿತುಕೊಳ್ಳಬೇಕಾಗಿತ್ತು. ಕಮ್ಮಾರಿಕೆ ಕೆಲಸದಲ್ಲಿ ಇದ್ದಿಲು ಸುಟ್ಟು ತಿದಿ ಯಂತ್ರದಲ್ಲಿ ಕಬ್ಬಿಣ ಹದ ಮಾಡಬೇಕಾಗುತ್ತದೆ. ಇದಕ್ಕೆ ಕೂಲಿಯಾಳು ಬೇಕು. ಇದೀಗ ತಿದಿ ಯಂತ್ರವನ್ನು ಸೌರ ಚಾಲಿತ ಮಾಡಿದ್ದರಿಂದ ಕಮ್ಮಾರನಿಗೆ ಸಹಾಯಕನೂ ಬೇಕಾಗಿಲ್ಲ. ಕೆಲಸವೂ ವೇಗವಾಗಿ ಮಾಡುವಂತಾಗಿದೆ. ದೇವರಾಜ್‌ರಂತೆಯೇ ಸುಮಾರು 10 ಕುಟುಂಬಗಳು ಇದೇ ಹಳ್ಳಿಯಲ್ಲಿ ಸೋಲಾರ್‌ನಿಂದಲೇ ಬದುಕನ್ನು ಕಟ್ಟಿಕೊಂಡಿದೆ.



ಸೋಲಾರ್ ಸ್ಮಾರ್ಟ್‌ಕ್ಲಾಸ್‌ನಲ್ಲಿ ಡೆಮೊ ನೀಡುತ್ತಿರುವ ಪ್ರಾಂಶುಪಾಲ ಹನುಮಂತಯ್ಯ

## ಚಹಾ ಕಪ್‌ನಲ್ಲಿ ನೆಮ್ಮದಿ

ಚನ್ನಪಟ್ಟಣ ತಾಲ್ಲೂಕಿನ ಬೇವೂರಿನಲ್ಲಿ ಗುಡಿ ಕೈಗಾರಿಕೆಯಾದ ಮಡಕೆ ತಯಾರಿಸುವ ಕಾಯಕಕ್ಕೆ ಸೌರ ಸ್ಪರ್ಶ ದೊರೆತಿದ್ದು, ಕೆಲಸ ಚುರುಕಾಗಿ ನಡೆಯಲು ಸಹಾಯವಾಗಿದೆ. ಕುಂಬಾರಿಕೆ ಕೆಲಸ ಮಾಡುವ ತಿಮ್ಮಪ್ಪ ರಾಜು ಮೊದಲು ದಿನವೊಂದಕ್ಕೆ ಮಣ್ಣಿನಿಂದ ಸುಮಾರು 700 ಟೀ ಕಪ್ ತಯಾರಿಸುತ್ತಿದ್ದರು. ಸೋಲಾರ್ ಬಳಕೆಯ ನಂತರ ದಿನಕ್ಕೆ 1500 ಕಪ್ ಒಬ್ಬರೇ ತಯಾರಿಸುತ್ತಾರೆ.

ರಾಜು ತಯಾರಿಸಿದ ಮಣ್ಣಿನ ಕಪ್ ಅನ್ನು ತಿದ್ದಿ ತೀಡಿ ಅದಕ್ಕೊಂದು ಸ್ಪಷ್ಟರೂಪ ಕೊಡುವುದು ಪುಟ್ಟಲಕ್ಷ್ಮಿ ಅವರ ಕೆಲಸ. ಮನೆಯಲ್ಲಿ ಕೆಲಸವಿಲ್ಲದೇ ಆದಾಯ ಗಳಿಕೆಯ ಮೂಲವಿಲ್ಲದೇ ಒದ್ದಾಡುತ್ತಿದ್ದ ಪುಟ್ಟಲಕ್ಷ್ಮಿ ಅವರಿಗೆ ಈಗ ಕೈತುಂಬ ಕೆಲಸ.

## ಸೋಲಾರ್ ಸ್ಮಾರ್ಟ್‌ಕ್ಲಾಸ್

ಚನ್ನಪಟ್ಟಣದ ಚೆಕ್ಕೆರೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸೋಲಾರ್ ಚಾಲಿತ ಸ್ಮಾರ್ಟ್‌ಕ್ಲಾಸ್ ಇದ್ದು, ಮಕ್ಕಳ ಕಲಿಕೆಗೆ ಸಹಕಾರಿಯಾಗಿದೆ. 1.75 ರೂ. ಲಕ್ಷ ವೆಚ್ಚದಲ್ಲಿ ಸೋಲಾರ್ ಸ್ಮಾರ್ಟ್‌ಬೋರ್ಡ್ ನಿರ್ಮಿಸಲಾಗಿದೆ. ಇದರಿಂದಾಗಿ ಕಂಪ್ಯೂಟರ್, ಎಲ್‌ಇಡಿ ಟೀವಿಗಾಗಿ ವಿದ್ಯುತ್ ಅನ್ನೇ ನೆಚ್ಚಿಕೊಳ್ಳಬೇಕಾಗಿಲ್ಲ. ಶಿಕ್ಷಕರು ತರಗತಿಯಲ್ಲಿ ಬೋಧಿಸುವ ವಿಜ್ಞಾನ, ಗಣಿತ ವಿಷಯಗಳು ಸ್ಮಾರ್ಟ್‌ಬೋರ್ಡ್‌ನಲ್ಲಿ ಚಿತ್ರರಗೊಳ್ಳುತ್ತದೆ.

## ಸುರಳೀತ ಹೈನುಗಾರಿಕೆ

ಹಸು ಸಾಕುವುದು, ಅದರ ನಿರ್ವಹಣೆ ಸುಲಭದ ಕೆಲಸವಲ್ಲ. ಹಾಲು ಕರೆಯುವ ಹಸು ಇದ್ದರೆ ಕೆಲಸ ಜಾಸ್ತಿ ಎಂದು ಹಸು ಕಟ್ಟಲು ಹಿಂಜರಿಯುವವರೇ ಬಹಳ ಮಂದಿ. ಆದರೆ ಚನ್ನಪಟ್ಟಣ ತಾಲ್ಲೂಕು ಸೋಗಲಪಾಳ್ಯದ ಭಾಗ್ಯಮ್ಮ ಬೋರೇಗೌಡ ಅವರಿಗೆ ಹಸು ಕರೆಯುವ ಕಾಯಕ ಬಲು ಸುಲಲಿತ. ಇವರ ಬಳಿ ಇರುವ ಆರು ಹಸುಗಳಿಂದ ಕೆಲವೇ ನಿಮಿಷಗಳಲ್ಲಿ 40 ಲೀಟರ್ ಹಾಲು ಕರೆದು ಕ್ಯಾನ್ ತುಂಬುತ್ತಾರೆ ಭಾಗ್ಯಮ್ಮ. ಇದಕ್ಕೆ ಕಾರಣ ಸೋಲಾರ್ ಆಧರಿತ ಹಾಲು ಕರೆಯುವ ಯಂತ್ರ.

‘ಸೆಲ್ಕೋ 64 ಸಾವಿರ ರೂಪಾಯಿ ವೆಚ್ಚದ ಡಿಸಿ ಮೋಟಾರ್ ಇರುವ ಸೋಲಾರ್ ಚಾಲಿತ ಹಾಲು ಕರೆಯುವ ಯಂತ್ರವನ್ನು ನೀಡಿದ್ದು, ಇದು ವಿದ್ಯುತ್ ವೆಚ್ಚವನ್ನು ತಪ್ಪಿಸಿದೆ. ಶ್ರಮವನ್ನೂ ನಿವಾರಿಸಿದೆ. ಹೈನುಗಾರಿಕೆ ಬದುಕನ್ನು ಕಟ್ಟಿಕೊಟ್ಟಿದೆ’ ಎನ್ನುವಾಗ ಇವರ ಕಣ್ಣುಗಳಲ್ಲಿ ಬೆಳಕು ಮೂಡುತ್ತದೆ.

## ಬದುಕು ರೂಪಿಸಿದ ಹೊಲಿಗೆ ಯಂತ್ರ

ಚನ್ನಪಟ್ಟಣ ತಾಲ್ಲೂಕಿನ ಸುಳ್ಳೇರಿಪಾಳ್ಯದ ಸೆಲ್ಕೋ ಫಲಾನುಭವಿಯಾದ ಭಾಗ್ಯ ಇವರದು ಇನ್ನೊಂದು ಯಶೋಗಾಥೆ. ಭಾಗ್ಯ ಹೊಲಿಗೆಯಲ್ಲಿ ನಿಪುಣೆ. ಇವರಿಗೆ ಸೋಲಾರ್ ಚಾಲಿತ ಹೊಲಿಗೆ ಯಂತ್ರವನ್ನು ಸೆಲ್ಕೋ ಒದಗಿಸಿದೆ. ಹಳ್ಳಿಯ ಮಹಿಳೆಯರಿಗೆ ಕಡಿಮೆ ವೆಚ್ಚದಲ್ಲಿ ಸೀರೆ ಫಾಲ್ ಹಾಕುವುದು, ರವಿಕೆ ಹೊಲಿಯುವುದು, ಕಸೂತಿ ಕೆಲಸವನ್ನು ಕ್ಷಿಪ್ರವಾಗಿ ಮಾಡಿಕೊಡುವ ಭಾಗ್ಯ ಅವರಿಗೆ ಹೊಲಿಗೆ ಯಂತ್ರವೇ ಬದುಕನ್ನು ರೂಪಿಸಿಕೊಟ್ಟಿದೆ.

‘ಹಿಂದೆ ಹಳೆಯ ಹೊಲಿಗೆ ಮೆಷಿನ್‌ನಲ್ಲಿ ರವಿಕೆ ಹೊಲಿದು ಕೊಡುತ್ತಿದ್ದೆ. ಸಂಜೆ ಕರೆಂಟ್ ಹೋದರೆ ಕೆಲಸ ಬಾಕಿ ಉಳಿಯುತ್ತಿತ್ತು. ಸೋಲಾರ್ ಯಂತ್ರ ಬಂದ ಮೇಲೆ ಕರೆಂಟ್ ಹೋದರೂ ಚಿಂತೆಯಿಲ್ಲ. ಹೇಳಿದ ಸಮಯಕ್ಕೆ ಬಟ್ಟೆ ಹೊಲಿದು ಮುಗಿಸಲು ಅನುಕೂಲವಾಗಿದೆ. ಗಳಿಕೆಯೂ ಹೆಚ್ಚಿದೆ’ ಎಂದು ಸಂತೃಪ್ತಿಯ ಮಾತುಗಳನ್ನಾಡುತ್ತಾರೆ ಭಾಗ್ಯ.

ಸುಸ್ಥಿರ ಅಭಿವೃದ್ಧಿ ಹಾಗೂ ಗ್ರಾಮೀಣ ಭಾಗದ ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಸೆಲ್ಕೋ ಹಲವಾರು ಬಡಕುಟುಂಬಗಳಿಗೆ ನೀಡಿದ್ದು ಮಾತ್ರವಲ್ಲದೆ ಗೃಹೋದ್ಯಮ, ಗುಡಿಕೈಗಾರಿಕೆಗಳನ್ನು ಪೋಷಿಸಿ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಲೂ ಬರುತ್ತಿದೆ.

ಸೋಲಾರ್ ಶಕ್ತಿ ಬಳಸಿ ಉದ್ಯಮ ಕೈಗೊಳ್ಳಬಯಸುವ ಆಸಕ್ತರು ಹೆಚ್ಚಿನ ಮಾಹಿತಿಗಾಗಿ selco–india.com ವೆಬ್‌ಸೈಟ್ ನೋಡಬಹುದು.

ಪ್ರತಿಕ್ರಿಯಿಸಿ: feedback@sudha.co.in